# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ: 04.09.2021 ರಂದು ಬೆಳಿಗ್ಗೆ 11.30 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಿಂಗಸಂದ್ರ ವಾರ್ಡ್ ಸಂಖ್ಯೆ–191 ರ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದಂತಹ ಶ್ರೀ.ಪ್ರಸನ್ನಕುಮಾರ.ವಿ. ಉಪ–ಆಯುಕ್ತರು ರವರ ಸಮ್ಮುಖದಲ್ಲಿ ಅವರ ಅನುಮತಿಯೊಂದಿಗೆ ವಾರ್ಡ್ ಸಮಿತಿ ಸಭೆಯನ್ನು ನಡೆಸಲಾಯಿತು.

ಪ್ರಾರಂಭದಲ್ಲಿ ವಾರ್ಡ್ ಸಮಿತಿ ಕಾರ್ಯದರ್ಶಿ ಶ್ರೀ.ಎ.ಪಿ.ಶಿವಕುಮಾರ್, ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ–191, ಸಿಂಗಸಂದ್ರ ರವರು ಸಭೆಗೆ ಹಾಜರಾಗಿರುವ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು, ಹಾಗೂ ಇತರರನ್ನು ಸ್ವಾಗತಿಸಿ ಕಾರ್ಯಕ್ರಮ ಪ್ರಾರಂಭಿಸಿದರು.

ಹಿಂದಿನ ಸಭೆಯ ನಡಾವಳಿಗಳನ್ನು ಸಭೆಯಲ್ಲಿ ಮಂಡಿಸಿ ಸಂಬಂಧಪಟ್ಟ ಅಧಿಕಾರಿಗಳಿಂದ ಹಿಂದಿನ ಸಭೆಯ ನಡಾವಳಿಗಳ ಪಾಲನೆಯ ಬಗ್ಗೆ ಮಾಹಿತಿ ಪಡೆಯಲಾಯಿತು. ಅದರಂತೆ ಇಂದಿನ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು ಈ ಕೆಳಕಂಡಂತಿರುತ್ತದೆ.

1.ಕೋವಿಡ್–19 ಮಹಾಮಾರಿ ಸಾಂಕ್ರಮಿಕರೋಗ ಹರಡದಂತೆ ಮುಂಜಾಗ್ರತಕ್ರಮ ಕೈಗೊಳ್ಳಲು ತೆಗೆದುಕೊಳ್ಳಬಹುದಾದ ಕ್ರಮಗಳು.
2.ವಿಪತ್ತು ನಿರ್ವಹಣಾ ಸಮಿತಿ(ಡಿಸಾಸ್ಟರ್ ಮ್ಯಾನೇಜಮೆಂಟ್‌ಕಮಿಟಿ) ನಿರ್ವಹಿಸಬೇಕಾದ ಕ್ರಮಗಳ ಬಗ್ಗೆ.
3.ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವುದು.
4.ವಾರ್ಡ್‌ನ ಕುಂದುಕೊರತೆಗಳ ಬಗ್ಗೆ ಚರ್ಚಿಸುವುದು,
5.ಮಳೆಯಿಂದ ಸಂಭವಿಸಿದ/ ಸಂಭವಿಸಬಹುದಾದ ಅನಾಹುತಗಳ ಬಗ್ಗೆ ಕ್ರಮ ಕೈಗೊಳ್ಳವ ಬಗ್ಗೆ ಚರ್ಚಿಸುವುದು,
6.BWSSB Project ಮತ್ತು ನಿರ್ವಹಣೆಯ ಬಗ್ಗೆ ಚರ್ಚಿಸುವುದು,
7.ಕುಡಿಯುವನೀರು ಸರಬರಾಜು ಬಗ್ಗೆಚರ್ಚಿಸುವುದು,
8.ಗೇಲ್‌ಗ್ಯಾಸ್ ಪೈಪ್ ಲೈನ್ ನಿರ್ವಹಣೆಯ ಬಗ್ಗೆ ಚರ್ಚಿಸುವುದು,

ಸಭೆಯ ನಡಾವಳಿಗಳು

1. ಕೂಡ್ಲು ಅಂಬೇಡ್ಕರ್ ಕಾಲೋನಿಯಲ್ಲಿ ಬಿ.ಡಬ್ಲ್ಯು.ಎಸ್.ಎಸ್.ಬಿ ಯವರು ಸ್ಯಾನಿಟರಿ ಪೈಪ್‌ಲೈನ್ ಮತ್ತು ಕುಡಿಯುವ ನೀರಿನ ಪೈಪ್‌ಲೈನ್ ಕೆಲಸ ಇನ್ನು ಕೈಗೊಂಡಿಲ್ಲವೆಂದು ಸ್ಥಳಿಯರಾದ ಶ್ರೀ ಚಿಕ್ಕಮುನಿಯಪ್ಪ ರವರು ಸಭೆಯಲ್ಲಿ ತಿಳಿಸಿದರು. ಸರಿಯಾದ ರಸ್ತೆ ಇರುವುದಿಲ್ಲ, ಮ್ಯಾನ್ ಹೋಲ್ ನಲ್ಲಿ ಸಿಲ್ಟ್ ತುಂಬಿ ನೀರು ಸರಾಗವಾಗಿ ಹೋಗುವುದಿಲ್ಲ, ಮತ್ತು ಕಾವೇರಿ ಲೇಔಟ್ ನಲ್ಲಿ ಸ್ಯಾನಿಟರಿ ಲೈನ್ ಮಾಡಿಲ್ಲವೆಂದು ಸ್ಥಳಿಯರು ದೂರನ್ನು ನೀಡಿದರು. ಬಿ.ಡಬ್ಲ್ಯು.ಎಸ್.ಎಸ್.ಬಿ ಯವರು ಒಳಚರಂಡಿಗೆ ಸಂಬಂಧಿಸಿದ ಸಮಸ್ಯೆಗಳನ್ನು ತುರ್ತಾಗಿ ಪರಿಹರಿಸಬೇಕೆಂದು ನೋಡಲ್ ಅಧಿಕಾರಿಗಳು ಬಿ.ಡಬ್ಲ್ಯು.ಎಸ್.ಎಸ್.ಬಿ ಮತ್ತು ಎಲ್ & ಟಿ ಸಹಾಯಕ ಅಭಿಯಂತರರಿಗೆ ಸೂಚಿಸಿದರು.

2. ಕೂಡ್ಲು 3ನೇ ಮೇನ್ 3ನೇ ಕ್ರಾಸ್ ಪಕ್ಕದ ರೋಡ್ ನಲ್ಲಿ ಕಸವನ್ನು ಹಾಕುತ್ತಿದ್ದಾರೆ, ಎಂದು ಸ್ಥಳಿಯರಾದ ಶ್ರೀ ಮಂಜು ರವರು ದೂರನ್ನು ನೀಡಿದರು. ಇದಕ್ಕೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿಗಳು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚನೆ ನೀಡಿದರು.

3. ಕೂಡ್ಲು ಗ್ರಾಮದಲ್ಲಿ ತುಂಬ ಕಂಬಳಿ ಹುಳುಗಳು ಹೆಚ್ಚಾಗಿದ್ದು, ಔಷಧಿ ಸಿಂಪಡಿಸಬೇಕೆಂದು ಸ್ಥಳಿಯರಾದ ಶ್ರೀ ಮಂಜುನಾಥ ರವರು ಸಭೆಯಲ್ಲಿ ತಿಳಿಸಿದರು. ಇದರ ಬಗ್ಗೆ ಕೂಡ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿಗಳು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚನೆ ನೀಡಿದರು.

4. ವಾರ್ಡ್ ವ್ಯಾಪ್ತಿಯಲ್ಲಿ ಹಂದಿ, ಮತ್ತು ನಾಯಿಗಳ ಹಾವಳಿ ಹೆಚ್ಚಾಗಿದ್ದು, ಇದನ್ನು ನಿಯಂತ್ರಿಸಲು ಸ್ಥಳಿಯರಾದ ಶ್ರೀ ಕೇಬಲ್ ಶ್ರೀನಿವಾಸ್ ರವರು ಸಭೆಯಲ್ಲಿ ತಿಳಿಸಿದರು. ನೋಡಲ್ ಅಧಿಕಾರಿಗಳು ಇದರ ಬಗ್ಗೆ ಕ್ರಮ ವಹಿಸಲು ನೋಡಲ್ ಅಧಿಕಾರಿಗಳು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚನೆ ನೀಡಿದರು.

5. ವಾರ್ಡಿನಲ್ಲಿ ಎಲ್ಲಾ ಕಡೆ ರಸ್ತೆಗಳು ಹಾಳಾಗಿದ್ದು, ಕೆಲವು ಕಡೆ ಗುಂಡಿಗಳು ಬಿದ್ದಿದೆ. ಎಂದು ಸ್ಥಳಿಯರಾದ ಶ್ರೀ ಗೋವಿಂದರೆಡ್ಡಿರವರು ಸಭೆಯಲ್ಲಿ ತಿಳಿಸಿದರು. ಗುಂಡಿಗಳನ್ನು ಮುಚ್ಚಲು ನೋಡಲ್ ಅಧಿಕಾರಿಗಳು ಬಿ.ಬಿಎಂ.ಪಿ ಸಹಾಯಕ ಅಭಿಯಂತರರಿಗೆ ಸೂಚನೆ ನೀಡಿದರು. ಹಾಗೂ ಕೂಡ್ಲುನಲ್ಲಿ ಒಂದು ಸಾರ್ವಜನಿಕ ಶೌಚಾಲಯಗಳಿರುವುದಿಲ್ಲ ಎಂದು ಸ್ಥಳಿಯರಾದ ಶ್ರೀ ಮಂಜುನಾಥ ರವರು ಸಭೆಯಲ್ಲಿ ತಿಳಿಸಿದರು. ಅವಶ್ಯಕತೆ ಇರುವ ಕಡೆ ಸಾರ್ವಜನಿಕ ಶೌಚಾಲಯ ನಿರ್ಮಿಸಲು ನೋಡಲ್ ಅಧಿಕಾರಿಗಳು ಬಿ.ಬಿಎಂ.ಪಿ ಸಹಾಯಕ ಅಭಿಯಂತರರಿಗೆ ಸೂಚನೆ ನೀಡಿದರು.

6. ದೊಡ್ಡನಾಗಮಂಗಲ ರೋಡ್ ಪೂರ್ಣವಾಗಿ ಹಾಳಾಗಿದ್ದು, ರಸ್ತೆ ನಿರ್ಮಾಣ ಮಾಡಿ 3 ತಿಂಗಳಾಗಿದೆ ಈಗ ಓಡಾಡಲು ಆಗುತ್ತಿಲ್ಲವೆಂದು ಸ್ಥಳಿಯರಾದ ಶ್ರೀ ಕೇಬಲ್ ಶ್ರೀನಿವಾಸ ರವರು ಸಭೆಯಲ್ಲಿ ತಿಳಿಸಿದರು. ಮೇಜರ್ ರೋಡ್ ರವರಿಗೆ ಪತ್ರ ಬರೆಯಲು ನೋಡಲ್ ಅಧಿಕಾರಿಗಳು ಬಿ.ಬಿಎಂ.ಪಿ ಸಹಾಯಕ ಅಭಿಯಂತರರಿಗೆ ಸೂಚನೆ ನೀಡಿದರು.

7. ಕೂಡ್ಲು ಕಾಲೋನಿಯಲ್ಲಿ ಕುಡಿಯುವ ನೀರು ಸರಬರಾಜು ಸಾಕಾಗುತ್ತಿಲ್ಲ, ಆದ್ದರಿಂದ ಇನ್ನು ಹೆಚ್ಚು ಟ್ಯಾಂಕರ್‌ಗಳಿಂದ ನೀರು ಸರಬರಾಜು ಮಾಡಬೇಕು. ಎಂದು ಸ್ಥಳಿಯರಾದ ಶ್ರೀ ಚಿಕ್ಕಮುನಿಯಪ್ಪ ರವರು ಮತ್ತು ಶ್ರೀ ಮಂಜು ರವರು ಕೇಳಿದರು. ಅದಕ್ಕೆ ಸಂಬಂಧಿಸಿದಂತೆ ಕ್ರಮ ವಹಿಸಲು ನೋಡಲ್ ಅಧಿಕಾರಿಗಳು ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರಿಗೆ ಸೂಚನೆ ನೀಡಿದರು.

8. ಕೂಡ್ಲು ಕಾಲೋನಿಗೆ ಕಾವೇರಿ ನೀರು ಸರಬರಾಜು ಇನ್ನುವರೆಗೂ ಮಾಡಿಲ್ಲ, ಬಿ.ಡಬ್ಲ್ಯು.ಎಸ್.ಎಸ್.ಬಿ ಮೀಟಿಂಗ್‌ಗೆ ಬರುವುದಿಲ್ಲ, ಕಾವೇರಿ ಮೀಟರ್ ಕಟ್ಟಲು ನಾವು ರೆಡಿ ಇದ್ದೇವೆ ಆದಷ್ಟು ಬೇಗ ಕೂಡ್ಲು ಕಾಲೋನಿಗೆ ಕಾವೇರಿ ನೀರು ಸರಬರಾಜು ಮಾಡಬೇಕೆಂದು ಸ್ಥಳಿಯರಾದ ಶ್ರೀ ಮಂಜುರವರು ಒತ್ತಾಯಿಸಿದರು.
ಅದಕ್ಕೆ ಸಂಬಂದಿಸಿದಂತೆ ಬಿ.ಡಬ್ಲ್ಯು.ಎಸ್.ಎಸ್.ಬಿ ಯವರನ್ನು ಕರೆಸಿ ಮಾತುಕತೆ ಮಾಡಲು ನೋಡಲ್ ಅಧಿಕಾರಿಗಳು ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರಿಗೆ ಸೂಚನೆ ನೀಡಿದರು.

9. ಪರಪ್ಪನಅಗ್ರಹಾರ ದಲ್ಲಿ ಸ್ಯಾನಿಟರಿ ಲೈನ್ ಹೊಡೆದು ರಾಜಕಾಲುವೆಗೆ ಬಿಟ್ಟಿದ್ದಾರೆ, ಹಾಗೂ ಕಾವೇರಿ ಕುಡಿಯುವ ನೀರು ಕೂಡ ಸರಿಯಾಗಿ ಸರಬರಾಜು ಇಲ್ಲ, ಸರ್ಕಾರಿ ಶಾಲೆ ಹತ್ತಿರ ಸ್ಯಾನಿಟರಿ ಲೈನ್ ಹೊಡೆದಿದೆ, ಹೊಸಕುಂಟೆ ರಸ್ತೆ ಮತ್ತು ನೀರಿನ ಸಮಸ್ಯೆ ಇದೆ ಎಂದು ಸ್ಥಳಿಯರಾದ ಶ್ರೀ ಮುನಿಯಪ್ಪ ರವರು ಸಭೆಯಲ್ಲಿ ದೂರನ್ನು ನೀಡಿದರು. ಬಿ.ಡಬ್ಲ್ಯು.ಎಸ್.ಎಸ್.ಬಿ ಯವರನ್ನು ಪ್ರತೇಕವಾಗಿ ಕರೆಸಿ ಮಾತುಕತೆ ಮಾಡಲು ನೋಡಲ್ ಅಧಿಕಾರಿಗಳು ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರಿಗೆ ಸೂಚನೆ ನೀಡಿದರು.

10. ಪರಪ್ಪನ ಅಗ್ರಹಾರ ಅಂಜನಾದ್ರಿ ಬಡಾವಣೆಯಲ್ಲಿ 2 ಪೋಲುಗಳಿಲ್ಲ, ಹೊಸಕುಂಟೆ ರಸ್ತೆ, ವೀರಪ್ಪರೆಡ್ಡಿ ಲೇಔಟ್ ನಲ್ಲಿ 2 ಪೋಲುಗಳಿಲ್ಲವೆಂದು ಸ್ಥಳಿಯರಾದ ಶ್ರೀ ಮುನಿಯಪ್ಪ ರವರು ಸಭೆಯಲ್ಲಿ ದೂರನ್ನು ನೀಡಿದರು. ಇದಕ್ಕೆ ಸಂಬಂಧಿಸಿದಂತೆ ಕ್ರಮ ವಹಿಸಲು ಬೆಸ್ಕಂ ಸಹಾಯಕ ಅಭಿಯಂತರರಿಗೆ ನೋಡಲ್ ಅಧಿಕಾರಿಗಳು ಸೂಚನೆ ನೀಡಿದರು.

11. ಎ.ಇ.ಸಿ.ಎಸ್ ಲೇಔಟ್ ನಲ್ಲಿ ಹುಲ್ಲು ಬೆಳೆದಿದೆ. ಮತ್ತು ಚರ್ಚ್ ರೋಡ್ ನಲ್ಲಿ ರಸ್ತೆ, ಮತ್ತು ಸ್ಯಾನಿಟರಿ ಲೈನ್ ಇರುವುದಿಲ್ಲ ವೆಂದು ಸ್ಥಳಿಯರು ದೂರನ್ನು ನೀಡಿದರು. ಅದಕ್ಕೆ ಸಂಬಂಧಿಸಿದಂತೆ ನಾನೇ ಸ್ವತ: ಆ ಸ್ಥಳಕ್ಕೆ ಬಂದು ತೀರ್ಮಾನಿಸುತ್ತೇನೆ ಎಂದು ಸಭೆಯಲ್ಲಿ ಸಹಾಯಕ ಅಭಿಯಂತರರು ತಿಳಿಸಿದರು.

12. ವಾರ್ಡ್‌ನಲ್ಲಿ ಹೊಸದಾಗಿ ಬೀದಿದೀಪಗಳಿಲ್ಲ 3ವರ್ಷದಿಂದ ಕೇಳುತ್ತಿದ್ದೇವೆ ಎಂದು ಸ್ಥಳಿಯರಾದ ಶ್ರೀ ಕೇಬಲ್ ಶ್ರೀನಿವಾಸ ಮತ್ತು ಶ್ರೀ ಮಂಜುನಾಥ ರವರು ಸಭೆಯಲ್ಲಿ ತಿಳಿಸಿದರು. ಅದಕ್ಕೆ ಸಂಬಂಧಿಸಿದಂತೆ ಬೀದಿದೀಪದ ಸಹಾಯಕ ಅಭಿಯಂತರರಿಗೆ ತಿಳಿಸಲು ನೋಡಲ್ ಅಧಿಕಾರಿಗಳು ಸೂಚನೆ ನೀಡಿದರು.

13. ಎಲ್ & ಟಿ ರವರು ಕಾಲೋನಿಯಲ್ಲಿ ಇನ್ನುವರೆಗೂ ಕಾರ್ಯನಿರ್ವಹಿಸುತ್ತಿಲ್ಲ, ಹಾಗೂ ಒಂದು ಕಡೆಯಿಂದ ಕೆಲಸ ಮಾಡುತ್ತಿಲ್ಲ, ಅಲ್ಲಲ್ಲಿ ಕೆಲಸ ಮಾಡುತ್ತಿದ್ದು, ಯಾವುದನ್ನು ಪೂರ್ಣಗೊಳಿಸುತ್ತಿಲ್ಲವೆಂದು ಕೇಬಲ್ ಎಲ್ಲಾ ಕಟ್ ಮಾಡುತ್ತಿದ್ದು, ಸ್ಕ್ಯಾನಿಂಗ್ ಮಿಶಿನ್ ಅಳವಡಿಸಿಕೊಂಡು ಕೆಲಸ ಮಾಡುತ್ತಿಲ್ಲವೆಂದು ಸ್ಥಳಿಯರಾದ ಶ್ರೀ ಮಂಜುನಾಥರವರು ದೂರನ್ನು ನೀಡಿದರು. ಅದಕ್ಕೆ ಸಂಬಂಧಿಸಿದಂತೆ ಬಿ.ಡಬ್ಲ್ಯು.ಎಸ್.ಎಸ್.ಬಿ ಮೇಲಾಧಿಕಾರಿಗಳನ್ನು ಕರೆದು ಸಭೆಯನ್ನು ನಡೆಸಿ ಸೂಕ್ತ ಕ್ರಮ ವಹಿಸಲು ನೋಡಲ್ ಅಧಿಕಾರಿಗಳು ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರಿಗೆ ಸೂಚನೆ ನೀಡಿದರು.

14. ಒಳಚರಂಡಿಗೆ ಸಂಬಂಧಿಸಿದಂತೆ ಮ್ಯಾನ್‌ಹೋಲ್ ಮತ್ತು ಪೈಪ್‌ಲೈನ್‌ಗೆ ಸಂಬಂಧಿಸಿದಂತೆ ಮ್ಯಾನ್ ಹೋಲ್ ಗಳು ಮೇಲೆ ಇದೆ ಮತ್ತು ಪೈಪ್‌ಲೈನ್ ಕೆಳಗೆ ಮಾಡಿರುತ್ತಾರೆ ಹೀಗಾದರೆ ಮುಂದೆ ಹೇಗೆ ನೀರು ಹೋಗಲು ಸಾಧ್ಯವೆಂದು ಸ್ಥಳಿಯರಾದ ಶ್ರೀ ಚಿಕ್ಕಮುನಿಯಪ್ಪ ರವರು ಸಭೆಯಲ್ಲಿ ತಿಳಿಸಿದರು. ಅದಕ್ಕೆ ಸಂಬಂಧಿಸಿದಂತೆ ಬಿ.ಡಬ್ಲ್ಯು.ಎಸ್.ಎಸ್.ಬಿ ಯವರನ್ನು ಕರೆಸಿ ಚರ್ಚಿಸಿ ಕ್ರಮ ಕೈಗೊಳ್ಳುವಂತೆ ಮಾಡಲು ನೋಡಲ್ ಅಧಿಕಾರಿಗಳು ಸೂಚನೆ ನೀಡಿದರು.

15. ಕೂಡ್ಲು ಗ್ರಾಮದ ಕರಗದಮ್ಮ ದೇವಸ್ಥಾನ ಮುಖ್ಯರಸ್ತೆಯ ಹತ್ತಿರ ಮೋರಿ ಕುಸಿದಿದೆ. ಮಧ್ಯರಸ್ತೆಯಲ್ಲಿ ಮ್ಯಾನ್‌ಹೋಲ್ ಕುಸಿದಿದೆ ಎಂದು ಸ್ಥಳಿಯರಾದ ಶ್ರೀ ಮಂಜುನಾಥ ರವರು ದೂರನ್ನು ನೀಡಿದರು ಅದಕ್ಕೆ ಸಂಬಂಧಿಸಿದಂತೆ ನೋಡಲ್ ಅಧಿಕಾರಿಗಳು ಬಿ.ಡಬ್ಲ್ಯು.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಲು ತಿಳಿಸಿದರು.

16. ಪ್ರಥಮ ಮೋಟರ್ಸ್ ಹತ್ತಿರ ಅಬ್ಬಪ್ಪ ಲೇಔಟ್ ರೋಡ್ ಎ.ಟಿ.ಎಂ ಹತ್ತಿರ 2 ಸ್ಯಾನಿಟರಿ ಪೈಪ್ ಹೊಡೆದಿದೆ (ಪೋಲಿಸಪ್ಪನ ಮನೆ ಹತ್ತಿರ) ಎಂದು ಕೂಡ್ಲು ಮೋಹನ್ ರೆಡ್ಡಿ ರವರು ದೂರನ್ನು ನೀಡಿದರು.

17. ಕೂಡ್ಲು ಸರ್ವೆ ನಂ 127 ರಲ್ಲಿ 2 ಎಕರೆ 2 ಗುಂಟೆ ಸ್ಮಶಾನ ದಲ್ಲಿ ಗಿಡ ಹುಲ್ಲು ಬೆಳೆದಿದ್ದು ಸ್ವಚ್ಛಗೊಳಿಸಬೇಕೆಂದು ಸ್ಥಳಿಯರಾದ ಶ್ರೀ ಚಿಕ್ಕಮುನಿಯಪ್ಪ ರವರು ಸಭೆಯಲ್ಲಿ ತಿಳಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು ಸಂಚಾಲಕರು
ವಾರ್ಡ್ ನಂ –191 ಸಿಂಗಸಂದ್ರ

ವಾರ್ಡ್ ಕಮಿಟಿ ಅಧ್ಯಕ್ಷರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ವಾರ್ಡ್ ನಂ 191, ಸಿಂಗಸಂದ್ರ

ಪ್ರತಿಗಳು:–

1) ಮಾನ್ಯ ಆಡಳಿತಗಾರರು, ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2) ಮಾನ್ಯ ಆಯುಕ್ತರು, ಬೃ.ಬೆಂ.ಮ.ಪಾಲಿಕೆ ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
3) ಮಾನ್ಯ ಶಾಸಕರು, ಬೊಮ್ಮನಹಳ್ಳಿ ವಿಧಾನ ಸಭಾಕ್ಷೇತ್ರರವರ ಅವಗಾಹನೆಗೆ ಸಲ್ಲಿಸಿದೆ

4) ಮಾನ್ಯ ಶಾಸಕರು, ಬೆಂಗಳೂರು ದಕ್ಷಿಣ ವಿಧಾನ ಸಭಾಕ್ಷೇತ್ರರವರ ಅವಗಾಹನೆಗೆ ಸಲ್ಲಿಸಿದೆ

5) ಮಾನ್ಯ ಶಾಸಕರು, ಆನೇಕಲ್ ವಿಧಾನ ಸಭಾಕ್ಷೇತ್ರರವರ ಅವಗಾಹನೆಗೆ ಸಲ್ಲಿಸಿದೆ

6) ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ, ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ

7) ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯರವರ ಆವಗಾಹನೆಗೆ ಮಂಡಿಸಿದೆ.

8) ಉಪ ಆಯುಕ್ತರು, ಬೊಮ್ಮನಹಳ್ಳಿ ವಲಯರವರ ಆವಗಾಹನೆಗೆ ಮಂಡಿಸಿದೆ

9) ಮುಖ್ಯ ಅಭಿಯಂತರರು, ಬೊಮ್ಮನಹಳ್ಳಿ ವಲಯರವರಿಗೆ ಸೂಕ್ತ ಕ್ರಮಕ್ಕಾಗಿ

10ಆರೋಗ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯರವರಿಗೆ ಸೂಕ್ತ ಕ್ರಮಕ್ಕಾಗಿ

11) ಅರಣ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯರವರಿಗೆ ಸೂಕ್ತ ಕ್ರಮಕ್ಕಾಗಿ

12) ಡಿ.ಜಿ.ಎಂ. ಗೇಲ್‌ಗ್ಯಾಸ್‌ರವರಿಗೆ ಮುಂದಿನ ಕ್ರಮಕ್ಕಾಗಿ,

13) ಮುಖ್ಯಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರ ಅವಗಾಹನೆಗೆ ಕಳುಹಿಸಿದೆ

14) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕಾಗಿ

15) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಎಂ.ಆರ್.ಸಿ.ಎಲ್ ರವರಿಗೆ ಮುಂದಿನ ಕ್ರಮಕ್ಕಾಗಿ

16) ಕಾರ್ಯಪಾಲಕ ಅಭಿಯಂತರರು, ಕೆರೆಗಳ ವಿಭಾಗ, ಬ್ಯ.ಬೆಂ.ಮ.ಪಾ. ರವರಿಗೆ ಮುಂದಿನ ಕ್ರಮಕ್ಕಾಗಿ

17) ಪಿ.ಎಸ್.ಐ. ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಂಚಾರ, ಪರಪ್ಪನಅಗ್ರಹಾರಠಾಣೆ,

18) ಕಂದಾಯ ಅಧಿಕಾರಿ (ಬೇಗೂರು) ವಲಯರವರ ಅವಗಾಹನೆಗೆ ಮಂಡಿಸಿದೆ

19) ವಾರ್ಡ್ ಸಮಿತಿ ಸದಸ್ಯರು ರವರಿಗೆ ಕಳುಹಿಸಲಾಗಿದೆ.

20)ಕಛೇರಿಕಡತಕ್ಕೆ